# **ಕರ್ನಾಟಕ ನಾಗರೀಕರ ಸೇವೆಗಳ ಖಾತರಿ ವಿಧೇಯಕ 2011ರ ಮುಖ್ಯಾಂಶಗಳು**

1. ಸರ್ಕಾರದಿಂದ ನಾಗರಿಕರಿಗೆ ಸುಮಾರು ಸೇವೆಗಳು ನೀಡಬೇಕಾಗಿ ಸಂವಿಧಾನಿಕವಾಗಿ ಭದ್ರತೆಯಿದ್ದರೂ ಸಾಮಾನ್ಯ ಜನರಿಗೆ ಈ ಸೇವೆಗಳು ಉತ್ತಮ ರೀತಿಯಲ್ಲಿ ಸಿಗುವುದಿಲ್ಲ ಎಂದು ಸರ್ಕಾರ ಗಮನಿಸಿದೆ. ಸಿಬ್ಬಂದಿಗಳು ಸೇವೆಗಳು ಒದಗಿಸದೆ ಇದ್ದರೂ ಅವರ ಸಂಬಳ ಇತ್ಯಾದಿಗೆ ಯಾವುದೇ ತೊಂದರೆಯಿಲ್ಲ ಎಂದು ಮನೋಭಾವ ಬೆಳೆದು ಸಾರ್ವಜನಿಕರಿಗೆ ಕಷ್ಟ ಉಂಟಾಗಿದೆ. ಸುಮಾರು ವರ್ಷಗಳ ಹಿಂದೆಯೇ **ನಾಗರೀಕ ಸನ್ನದನ್ನು** ಕಾರ್ಯಗತಗೊಳಿಸಿದ್ದರೂ ಸಹಾ ಆಡಳಿತ ಯಂತ್ರವು ಸೇವೆಗಳನ್ನು ಒದಗಿಸದಿರುವುದಕ್ಕೆ ಬದ್ಧತೆಯನ್ನು ಹೊಂದಿರುವುದಿಲ್ಲ. ಆದುದರಿಂದ ಆಡಳಿತ ಯಂತ್ರವನ್ನು ಚುರುಕುಗೊಳಿಸಲು ಹಾಗೂ ಸೇವೆಗಳನ್ನು ಪಡೆಯಲು ನಾಗರೀಕರ ಸಬಲೀಕರಣಗೊಳಿಸಬೇಕಾಗುತ್ತದೆ ಹಾಗೂ ಆಡಳಿತದಲ್ಲಿ ಪಾರದರ್ಶಕವಾದ ಹೊಣೆಗಾರಿಕೆ ಅತ್ಯಾವಶ್ಯಕವಿದೆ.

2. **ಈ ನಿಟ್ಟಿನಲ್ಲಿ ಮೊಟ್ಟಮೊದಲನೆಯದಾಗಿ, ಮಧ್ಯಪ್ರದೇಶದಲ್ಲಿ, ಮಧ್ಯಪ್ರದೇಶ ಲೋಕ್ ಸೇವಾನ್ ಕಿ ಗ್ಯಾರಂಟಿ ಅಧಿನಿಯಮ 2010 ನ್ನು ಜಾರಿಗೆ ತರಲಾಗಿದೆ.** ನಂತರ ದೆಹಲಿಯಲ್ಲಿ 11 ಇಲಾಖೆಗಳ 82 ಸೇವೆಗಳನ್ನೊಳಗೊಂಡ ದೆಹಲಿ [ರೈಟ್ ಆಫ್ ಸಿಟಿಜನ್ ಟು ಟೈಂ ಬಾಂಡ್ ಡೆಲವರಿ ಆಫ್ ಸರ್ವಿಸಸ್] ಆಕ್ಟ್‌ನ್ನು, ಬಿಹಾರದಲ್ಲಿ 10 ಇಲಾಖೆಗಳ 30 ಸೇವೆಗಳನ್ನೊಳಗೊಂಡ ಬಿಹಾರ್, ದಿ ರೈಟ್ ಟು ಸರ್ವಿಸ್ ಆಕ್ಟ 2011 ಅನ್ನು ಮತ್ತು ಪಂಜಾಬ್ ರಾಜ್ಯದಲ್ಲಿ 67 **ಸೇವೆಗಳನ್ನು** ಜಾರಿಗೊಳಿಸಲಾಗಿದೆ. ಅಲ್ಲದೇ, ಜಮ್ಮು ಮತ್ತು ಕಾಶ್ಮೀರ್, ರಾಜಸ್ಥಾನ, ಜಾರ್ಖಂಡ್ ಮುಂತಾದ ರಾಜ್ಯಗಳಲ್ಲೂ ಈ ಕಾಯ್ದೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

3. ಇಡೀ ರಾಷ್ಟ್ರದಲ್ಲಿ ಅತಿ ಹೆಚ್ಚು ಪ್ರಮಾಣದ ಸೇವೆಯನ್ನು ನೀಡಲು ಉದ್ದೇಶಿತ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ವಿಧೇಯಕ, 2011 ರ **ಮೊದಲ ಹಂತದಲ್ಲಿ ಕಾರ್ಯಗತಗೊಳಿಸಲು ನಿರ್ದಿಷ್ಟ 11 ಇಲಾಖೆಗಳ 151 ಸೇವೆಗಳನ್ನು ಗುರುತಿಸಿದೆ.** ಇನ್ನುಳಿದ ಇಲಾಖೆಗಳನ್ನು ಹಂತಹಂತವಾಗಿ ಸೇರಿಸಲು ಸರ್ಕಾರ ಕ್ರಮ ಜರುಗಿಸಲಿದೆ. **ನಾಗರೀಕರಿಗೆ ನೀಡುವ ಸೇವೆಗಳ**

**ಅವಧಿಗೆ ಸಂಬಂಧಿಸಿದಂತೆ ಗರಿಷ್ಠ ಕೆಲಸದ ದಿವಸಗಳನ್ನು ನೀಡಲಾಗಿದೆ. ಈ ವಿಧೇಯಕವು ಆಡಳಿತದಲ್ಲಿ ಭ್ರಷ್ಟತನ ಕಡಿಮೆ ಮಾಡುವುದಲ್ಲದೇ ಪಾರದರ್ಶಕತೆಯನ್ನು ತರುವುದು.** ಇದರಿಂದ ಸಾರ್ವಜನಿಕರ ದೂರುಗಳು ಕಡಿಮೆಯಾಗುವುದಲ್ಲದೇ ರಾಜ್ಯದ ಮತ್ತು ಪ್ರಜೆಗಳ ಏಳಿಗೆಗೆ ಸಹಕಾರಿಯಾಗುವುದು. ಅಲ್ಲದೇ ಇಲಾಖೆಯ ಸಿಬ್ಬಂದಿಗಳಿಂದ ನಾಗರೀಕರಿಗೆ ನೀಡುವ ಸೌಲಭ್ಯಗಳು ಹಕ್ಕುಗಳನ್ನು ಪೂರೈಸಲು **ಸಂವೇದನಾಶೀಲ ಮನೋಭಾವವನ್ನು** ಮೂಡಿಸಲಾಗುವುದು.

4. ನಾಗರೀಕರು ನೀಡುವ ಅರ್ಜಿಗಳನ್ನು ಸಮಯಬದ್ಧವಾಗಿ ವಿಲೇ ಮಾಡಲಾಗುತ್ತಿದ್ದೆಯೇ ಇಲ್ಲವೇ ಎಂಬುದನ್ನು ಮೇಲ್ವಿಚಾರಣೆ ಮಾಡಲು ಹಾಗೂ ಮಾಹಿತಿಯನ್ನು ಸಾರ್ವಜನಿಕರಿಗೆ **ಇ–ಆಡಳಿತ / ಅಂತರಜಾಲ ಮೂಲಕ** ನೇರವಾಗಿ ನೀಡಲು ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅಲ್ಲದೆ ಈ ಸೇವೆಯನ್ನು ಅಚ್ಚುಕಟ್ಟಾಗಿ ನೀಡಲು **ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು** ಸಹ ನೀಡಲಾಗುದು. ಅರ್ಜಿಗಳನ್ನು ಸಲ್ಲಿಸಲು ಹಾಗೂ **ಯಾವುದೇ ಕಾರಣ ಇಲ್ಲದೇ ಅರ್ಹ ಅರ್ಜಿಯನ್ನು ತಿರಸ್ಕರಿಸಲು** ಅವಕಾಶ ಇರಬಾರದೆಂಬ ಉದ್ದೇಶದಿಂದ ಒಂದು **<u>ಅಧಿಕೃತ ನಮೂನೆಯನ್ನು ಹಾಗೂ ಬೇಕಾಗುವ ದಾಖಲಾತಿಗಳ ಚೆಕ್‌ಲಿಸ್ಟ್</u>** ಸಹ ಮುದ್ರಿತ ನಮೂನೆಯಲ್ಲಿ ಒದಗಿಸಲಾಗುವುದು.

5. ಇಲಾಖೆಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದವರಿಗೆ "**ಉತ್ತಮ ಕೆಲಸಗಾರರು/ ಸೇವಾದಾರರು**" ಎಂದು ಪ್ರಮಾಣ ಪತ್ರ ನೀಡಲಾಗುವುದು, ಹಾಗೂ ಅವರ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ದಾಖಲಿಸಲಾಗುವುದು. ಇದರಿಂದ ಬೇರೆಯವರೂ ಇದೇ ಮಾದರಿಯಲ್ಲಿ ಸೇವೆ ಸಲ್ಲಿಸಲು ಉತ್ತೇಜನ ನೀಡಲಾಗುವುದು. **ಅರ್ಹ ಅರ್ಜಿಗಳ ವಿಲೇಯಲ್ಲಿ ನಿರಂತರ ವಿಫಲರಾಗುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕಟ್ಟುನಿಟ್ಟಿನ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.** ಇದರಿಂದ ಇಡೀ ಇಲಾಖೆಯು ನಾಗರೀಕರಿಗೆ ನೀಡುವ ಸೌಲಭ್ಯಗಳು ಉತ್ತಮ ರೀತಿಯಲ್ಲಿ ತಲುಪಿಸಲು ಪ್ರೇರೇಪಿಸಿದಂತಾಗುವುದು.

6. ಬಿಹಾರ ರಾಜ್ಯದಲ್ಲಿ ಪರಿಹಾರ ಶುಲ್ಕ/ದಂಡ ರೂ. 500 ರಿಂದ ರೂ. 5000 ಇರುತ್ತದೆ. ದೆಹಲಿಯಲ್ಲಿ ಪ್ರತಿ ಪ್ರಕರಣಕ್ಕೆ ಪ್ರತಿದಿನ ಪರಿಹಾರ ರೂ. 10 ರಿಂದ ರೂ. 200 ಇರುತ್ತದೆ. **<u>ಕರ್ನಾಟಕದಲ್ಲಿ ರೂ. 20 ರಿಂದ ರೂ. 500</u>**

**<u>ಗಳವರೆಗೆ ಪರಿಹಾರ ಶುಲ್ಕವನ್ನು ವಿಧಿಸಲು ಉದ್ದೇಶಿಸಲಾಗಿದೆ.</u>** ಆದರೆ, ಮುಂದಿನ ದಿವಸಗಳಲ್ಲಿ ಈ ಮೊಬಲಗನ್ನು ಬದಲಾವಣೆ ಮಾಡಲು ಅವಕಾಶ ಇರುತ್ತದೆ.

7. **ಕರ್ನಾಟಕದ ನಾಗರೀಕರಿಗೆ ಸೇವೆಗಳ ಖಾತರಿ ವಿಧೇಯಕ 2011 ಕ್ಕೆ ರೂ. 5 ಕೋಟಿಗಳನ್ನು ಕಾರ್ಪಸ್ ಫಂಡ್ [Corpus Fund] ಇಡಲು ಉದ್ದೇಶಿಸಲಾಗಿದೆ.** ನಾಗರೀಕರಿಗೆ ಯಾವುದೇ ಸೇವೆಯಲ್ಲಿ ವಿಳಂಬವಾದರೆ ತಕ್ಷಣ ಸರ್ಕಾರದ ವತಿಯಿಂದ ಅವರಿಗೆ ಪರಿಹಾರ ಶುಲ್ಕವನ್ನು ನೀಡಲಾಗುವುದು ಹಾಗೂ ಈ ಮೊತ್ತವನ್ನು ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳಿಂದ ಸಮಯಬದ್ಧವಾಗಿ ವಸೂಲಿ ಮಾಡಲಾಗುವುದು. ಇದರಿಂದಾಗಿ ರೂ. 5 ಕೋಟಿಗಳ **ಕಾರ್ಪಸ್ ಫಂಡ್,** ಹಾಗೆಯೇ ಇರುತ್ತದೆ.

***********

## ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ವಿಧೇಯಕ, 2011ದ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಕಾರ್ಯಚಟುವಟಿಕೆಗಳು

***

ಉತ್ತಮ ಆಡಳಿತ ಒದಗಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದ್ದು ಅದರಲ್ಲಿ ಸರ್ಕಾರವು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ಈಗಾಗಲೇ ವಿಧಾನ ಮಂಡಲದಿಂದ ಅಂಗೀಕೃತವಾಗಿದೆ. ಸರ್ಕಾರಿ ಸಿಬ್ಬಂದಿಯಿಂದ ಸಾರ್ವಜನಿಕರಿಗೆ ಜವಾಬ್ದಾರಿಯುತ ಸೇವಾ ಸೌಲಭ್ಯಗಳನ್ನು ನೀಡುವಲ್ಲಿ ಸುಧಾರಣೆ ತರುವುದು ಇದರ ಉದ್ದೇಶ್ಯವಾಗಿರುತ್ತದೆ. ಈ ಅಧಿನಿಯಮವು **ಆಡಳಿತವನ್ನು ಚುರುಕುಗೊಳಿಸುವುದಲ್ಲದೇ, ಭ್ರಷ್ಟತನ ಕಡಿಮೆ ಮಾಡಿ ಪಾರದರ್ಶಕತೆಯನ್ನು** ಹೆಚ್ಚಿಸಿ, ಹಾಗೂ ಸಾರ್ವಜನಿಕರ ದೂರುಗಳನ್ನು ಕಡಿಮೆ ಮಾಡುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ.

ಮೊದಲ ಹಂತದಲ್ಲಿ 11 ವಿವಿಧ ಇಲಾಖೆಗಳ ಸುಮಾರು 151 ಸೇವೆಗಳನ್ನು ಗುರುತಿಸಿದ್ದು ವಿವರ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ನೀಡುವ ಸೇವೆಗಳ ಸಂಖ್ಯೆ |
|---|---|---|
| 1 | ನಗರಾಭಿವೃದ್ಧಿ ಇಲಾಖೆ | 27 |
| 2 | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 9 |
| 3 | ಸಾರಿಗೆ ಇಲಾಖೆ | 4 |
| 4 | ಕಂದಾಯ ಇಲಾಖೆ | 24 |
| 5 | ಒಳಾಡಳಿತ ಇಲಾಖೆ | 13 |
| 6 | ಶಿಕ್ಷಣ ಇಲಾಖೆ | 12 |
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 12 |
| 8 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 10 |
| 9 | ಆರ್ಥಿಕ ಇಲಾಖೆ | 10 |
| 10 | ಕಾರ್ಮಿಕ ಇಲಾಖೆ | 25 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | 5 |
| | ಒಟ್ಟು | 151 |

ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ನ್ನು ಏಪ್ರಿಲ್ 2 ರಿಂದ ಜಾರಿ ಮಾಡಲು ಉದ್ಧೇಶಿಸಲಾಗಿದೆ. ಮಾರ್ಚ್ 1ರಂದು ಈ ಅಧಿನಿಯಮದ ಪೈಲಟ್ ನ್ನು ನಾಲ್ಕು ಕಂದಾಯ ವಿಭಾಗಗಳ ಒಂದೊಂದು ಜಿಲ್ಲೆಯ (ಧಾರವಾಡ, ಬೀದರ, ದಾವಣಗೆರೆ ಮತ್ತು ಉಡುಪಿ) ಒಂದೊಂದು ತಾಲ್ಲೂಕುಗಳಲ್ಲಿ ಅಂದರೆ ಧಾರವಾಡ, ಔರಾದ, ಚಿತ್ರದುರ್ಗ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಂದು ಕಂದಾಯ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗುವುದು.

ಈಗಾಗಲೇ ಈ ಅಧಿನಿಯಮಕ್ಕೆ ಕರಡು ನಿಯಮಗಳನ್ನು ದಿನಾಂಕ 14–02–2012ರಂದು ಆಕ್ಷೇಪಣೆಗಳನ್ನು/ ಸಲಹೆ/ಸೂಚನೆಗಳನ್ನು ಆಹ್ವಾನಿಸಿ ಪ್ರಕಟಿಸಲಾಗಿದೆ. ಹದಿನೈದು ದಿನಗಳ ನಂತರ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು/ ಸಲಹೆ/ಸೂಚನೆಗಳನ್ನು ಪರಿಶೀಲಿಸಿ ನಿಯಮಗಳನ್ನು ಅಂತಿಮಗೊಳಿಸಿ ಹೊರಡಿಸಲಾಗುವುದು.

ಈ ಅಧಿನಿಯಮದಡಿಯಲ್ಲಿ ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿ ಮತ್ತು ಮೇಲ್ವಿಚಾರಣೆ ಮಾಡಲು ಹಾಗೂ ಅರ್ಜಿಯ ಹಂತವನ್ನು ತಿಳಿಯಲು, ರಾಷ್ಟ್ರೀಯ ಮಾಹಿತಿ ಕೇಂದ್ರ, ನವದೆಹಲಿ ಇವರಿಂದ ಒಂದು ತತ್ರಾಂಶವನ್ನು ತಯಾರಿಸಲಾಗಿದೆ.

ನಾಗರೀಕರು ಸೇವೆಗಳನ್ನು ಪಡೆಯುವ ಬಗ್ಗೆ ವಾರ್ತಾ ಮತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ವಿವಿಧ ಮಾದ್ಯಮಗಳ ಮೂಲಕ ವಿನೂತನ ರೀತಿಯಲ್ಲಿ ಜನಜಾಗೃತಿ ಆಂದೋಲನವನ್ನು ಪ್ರಾರಂಭಿಸಲು ರೂ.1.00 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ.

ಅಧಿಸೂಚಿತ ಸೇವೆಗಳನ್ನು ಒದಗಿಸುವ 11 ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬೆಂಗಳೂರಿನಲ್ಲಿ ದಿನಾಂಕ 13–02–2012 ರಿಂದ 16–02–2012ರವರೆಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಅದರಲ್ಲಿ ಅಧಿನಿಯಮ, ಕರಡು ನಿಯಮಗಳು, ಎನ್.ಐ.ಸಿ.ಯವರು ತಯಾರಿಸಿರುವ ತತ್ರಾಂಶ ಮುಂತಾದವುಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಲಾಗಿದೆ.

ಅದೇ ರೀತಿಯಲ್ಲಿ ಪೈಲಟ್ ಯೋಜನೆಗಾಗಿ ಆಯ್ಕೆಯಾಗಿರುವ ನಾಲ್ಕು ಜಿಲ್ಲೆಗಳಲ್ಲಿ ದಿನಾಂಕ 15–02–2012 ರಿಂದ ದಿನಾಂಕ 25–02–2012ರವರೆಗೆ ಕೆಳಕಾಣಿಸಿದಂತೆ ಎರಡೆರಡು ದಿನಗಳ ಜಿಲ್ಲಾವಾರು ತರಬೇತಿಗಳನ್ನು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದೆ.

| | |
|---|---|
| ಉಡುಪಿ | ಫೆಬ್ರವರಿ 14 ಮತ್ತು 15, 2012. |
| ಚಿತ್ರದುರ್ಗ | ಫೆಬ್ರವರಿ 17 ಮತ್ತು 18, 2012 |
| ಬೀದರ್ | ಫೆಬ್ರವರಿ 24 ಮತ್ತು 25, 2012 |
| ಧಾರವಾಡ | ಫೆಬ್ರವರಿ 27 ಮತ್ತು 28, 2012. |

ಪೈಲಟ್‌ಗಾಗಿ ಆಯ್ಕೆಯಾಗಿರುವ ಜಿಲ್ಲೆಗಳಿಗೆ ಸಂಬಂಧಿತ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಇಲಾಖೆಗಳಿಗೆ ಬೇಕಾಗುವ ಸಿಬ್ಬಂದಿ ಮತ್ತು ಗಣಕಯಂತ್ರ, ಪ್ರಿಂಟರ್ ಮತ್ತು ಯುಪಿಎಸ್ ಮುಂತಾದವುಗಳನ್ನು ಒದಗಿಸುವ ಬಗ್ಗೆ ಕ್ರಮವಹಿಸಲಾಗುತ್ತಿದೆ.

ಈ ಅಧಿನಿಯಮದಡಿಯಲ್ಲಿ ಸಾರ್ವಜನಿಕರು ಸೇವೆಗಳನ್ನು ಹೇಗೆ ಪಡೆಯಬೇಕೆಂಬ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸಲು, ಅರ್ಜಿಯ ಹಂತವನ್ನು ತಿಳಿಯುವ ಬಗ್ಗೆ ಯು.ಐ.ಡಿ ಕರೆಕೇಂದ್ರಗಳ ಮಾದರಿಯಲ್ಲಿ ಒಂದು ಕರೆ ಕೇಂದ್ರವನ್ನು ಸ್ಥಾಪಿಸಲು ಇ–ಆಡಳಿತ ಇಲಾಖೆಯ ವತಿಯಿಂದ ರೂ.40.00 ಲಕ್ಷಗಳ ವೆಚ್ಚದಲ್ಲಿ ಪ್ರಸ್ತಾಪಿಸಲಾಗುವುದು.

– – –